ರಾಜ್ಯದಲ್ಲಿ ಹಸಿರು ಕಾರ್ಡುಗಳನ್ನು ವಾಪಸ್ ಪಡೆದು ಬೇರೆ ಬಣ್ಣದ ಕಾರ್ಡುಗಳನ್ನು ಆರ್ಹರಿಗೆ ನೀಡುವ ಬಗ್ಗೆ

೮೧. ಶ್ರೀ ಕೆ ಬಿ. ಕೋಳಿವಾಡ (ರಾಣೆಬೆನ್ನೂರು) .—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ರಾಜ್ಯದಲ್ಲಿ ಹಸಿರು ಕಾರ್ಡುಗಳ ಹಂಚಿಕೆಯಲ್ಲಿ ಲೋಪದೋಷಗಳ ಬಗೆಗೆ ಮತ್ತು ಆರ್ಹರಿಗೆ ಹಸಿರು ಕಾರ್ಡುಗಳು ದೊರಕದಿರುವುದರ ಬಗೆಗೆ ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಸರ್ಕಾರವು ಎಲ್ಲಾ ಹಸಿರು ಕಾರ್ಡುಗಳನ್ನು ವಾಪಸ್ಸುಪಡೆದು ಬೇರೆ ಬೇರೆ ಬಣ್ಣದ ಕಾರ್ಡುಗಳನ್ನು ಆರ್ಹರಿಗೆ ನೀಡುವುದೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) .—

ಅ) ಹೌದು

ಆ) ಈ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ.

ಸಹಾಯಕ ದಂತ ಚಿಕಿತ್ಸಕರಿಗೆ ವಯಂಬಡ್ತಿಯ ಅವಕಾಶಗಳನ್ನು ನೀಡದಿರುವ ಬಗೆ

೧೧೧. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ) .—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಎ) ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ ೬೦ ಎಸ್‌ಆರ್‌ಪಿ ೮೫, ದಿನಾಂಕ ೩-೧೨-೧೯೮೫ರ ಅನುಸಾರ ಸ್ಥಾಪಿಸಲಾದ ಪದೀಯ (ವೇತನ) ಸಮಿತಿಯು ಇಲಾಖೆಯಲ್ಲಿ ಆಡಳಿತದ ದಕ್ಷತೆಯನ್ನು ಹೆಚ್ಚಿಸುವುದಕ್ಕಾಗಿ ಕೆಲವು ಸಹಾಯಕ ದಂತ ಚಿಕಿತ್ಸಕರ ಹುದ್ದೆಗಳನ್ನು ಉನ್ನತೀಕರಿಸುವುದಕ್ಕಾಗಿ (ಅಪ್‌ಗ್ರೆಡೇಷನ್) ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ ಎಂಬುದು ವಾಸ್ತಾವಾಂಶ ಆಲ್ಲವೆ ?

ಬಿ) ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ ೬೬ ಎಸ್‌ಆರ್‌ಪಿ ೮೫, ದಿನಾಂಕ ೩೦-೧೦-೮೫ರ ಅನುಸಾರ ೧೯೮೫ ರಲ್ಲಿ ೩೩ ಹುದ್ದೆಗಳನ್ನು ಸೃಷ್ಟಿಸಿರುವುದು ಮತ್ತು ೧೯೮೭ ರಲ್ಲಿ ಸಹಾಯಕ ದಂತ ಚಿಕಿತ್ಸಕರುಗಳನ್ನು ವಯಂಬಡ್ತಿ ನೀಡಿ ೨೫ ಹುದ್ದೆಗಳನ್ನು ಭರ್ತಿ ಮಾಡಿರುವುದು ವಾಸ್ತಾವಿಕಾಂಶ ಆಲ್ಲವೆ ?

ಸಿ) ಲಿಬ್ಯಾ ಮತ್ತು ತಮಿಳುನಾಡುಗಳಲ್ಲಿ ಈಗಾಗಲೆ ಕಾರ್ಯ ನಿರ್ವಹಿಸುತ್ತಿರುವ ೩ ವೈದ್ಯರ ಗೌಪ್ಯವರದಿಗಳುಲಭ್ಯವಾಗದ ಕಾರಣ ಉಳಿದ ೮ ಹುದ್ದೆಗಳನ್ನು ಭರ್ತಿ ಮಾಡದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಿ) ಈ ಕಾರಣಕ್ಕಾಗಿ ಇತರೆ ೫ ವೈದ್ಯರುಗಳಿಗೆ ಅವರ ವಯಂಬಡ್ತಿ ಅವಕಾಶಗಳನ್ನು ೩ ವರ್ಷ ಗಳಿಂದ ವಂಚಿತರಾಗಿ ಮಾಡಿರುವುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) .—

ಎ) ಹೌದು

ಬಿ) ಹೌದು

ಸಿ) ಇಲ್ಲ

ಡಿ) ಇಲ್ಲ

Increasing the Bed Strength in Victoria Hospital, Bangalore.

193 SRI PERIKAL M. MALLAPPA (Chickpet) .—Will the Minister for Health and Family Welfare be pleased to state :—

a) The total bed strength in Victoria Hospital, Bangalore ?

b) Out of which the number of Special Wards ;

c) The number of days ; the patients will have to wait for getting admission as in-patients in the above Hospital ;

d) Whether any action has been taken to increase the bed strength in the above Hospital ;

e) If so, the proposed increase in bed strength during the current year both in general and special wards ?

SMT. K. S. NAGARATHNAMMA (Minister for Health and Family Welfare) .—

a) 976 beds.

b) 78 beds.

c) Patients are admitted immediately. They need not have to wait for admission.

d) 1000 beded Master Plan Building is under construction, in the premises of Victoria Hospital, Bangalore.

(e) Nil.

ಅಧ್ಯಕ್ಷರು.—ಪ್ರಶ್ನೋತ್ತರಗಳನ್ನು ಮುಂಡಿಸಲಾಯಿತು. ಈಗ ಪರದಿಗಳನ್ನೊಪ್ಪಿಸುವುದು.

ಪರದಿಗಳನ್ನೊಪ್ಪಿಸುವುದು

ಶ್ರೀ ಹೆಚ್. ವಿಶ್ವನಾಥ್ (ಅಧ್ಯಕ್ಷರು, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿ).—ಮಾನ್ಯ ಅಧ್ಯಕ್ಷರೇ, ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಾರ್ಯೋಚಟುವಟಿಕೆಗಳ ಬಗ್ಗೆ ಮತ್ತು ಹಿಂದುಳಿದ ವರ್ಗಸವರಿಗೆ ಸಾರ್ವಜನಿಕ ಉದ್ದಿಮೆಗಳ ಸೇವೆಯಲ್ಲಿ ಮೀಸಲಾತಿ ಬಗ್ಗೆ ಶಿಫಾರಸ್ಸುಗಳ ಸಂಬಂಧವಾಗಿ ಸರ್ಕಾರ ತೆಗೆದುಕೊಂಡಿರುವ ೧೧ ಮತ್ತು ೧೨ನೇ ಪರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು .—ಪರದಿಯನ್ನೊಪ್ಪಿಸಲಾಯಿತು. ಈಗ ಮುಖ್ಯ ಮಂತ್ರಿಯವರು ಅನುಪೂರಕ ಅಂದಾಜುಗಳನ್ನು ಸಭೆಗೆ ಒಪ್ಪಿಸುವುದು.

ವಿತ್ತೀಯ ಕಾರ್ಯಕಲಾಪ

1990-91ನೇ ಸಾಲಿನ ಅನುಪೂರಕ ಅಂದಾಜುಗಳ ಮಂಡನೆ

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೆ, ಭಾರತ ಸಂವಿಧಾನದ ೨೦೫(೧)ನೇ ಅನುಚ್ಛೇದದ ಪ್ರಕಾರ ೧೯೯೦-೯೧ನೇ ಸಾಲಿಗೆ ಸಂಬಂಧಿಸಿದಂತೆ ಅನುಪೂರಕ ಅಂದಾಜುಗಳನ್ನು ಅಂದರೆ ಒಂದನೇ ಕಂತನ್ನು ತಮ್ಮ ಅನುಮತಿ ಪಡೆದು ಸಭೆಗೆ ಒಪ್ಪಿಸುತ್ತೇನೆ.

ಕಾವೇರಿ ನ್ಯಾಯ ಪಂಚಾಯ್ತಿಯ ಬಗ್ಗೆ

ಶ್ರೀ ಪಾಟಾಳ್ ನಾಗರಾಜ್ .—ಮಾನ್ಯ ಅಧ್ಯಕ್ಷರೆ, ಕಾವೇರಿ ನ್ಯಾಯ ಪಂಚಾಯ್ತಿಯ ಬಗ್ಗೆ ಈಗಿನ ಸರ್ಕಾರದ ನಿಲುವೇನು ಎಂಬುದು ನಮಗೆ ಗೊತ್ತಾಗಿಲ್ಲ. ಹಿಂದಿನ ಸರ್ಕಾರ ಒಂದು ಉನ್ನತವಾದ ಸಮಿತಿಯನ್ನು ರಚಿಸಿದ್ದು ಆ ಸಮಿತಿಯ ಸಭೆ ಇದುವರೆಗೂ ನಡೆದಿಲ್ಲ, ಈ ಬಗ್ಗೆ ಸರ್ಕಾರದ ನಿಲುವೇನು ? ತಮಿಳು ನಾಡಿಗೆ ಕಾವೇರಿ ನದಿಯ ನೀರನ್ನು ಕೊಡುತ್ತೀರಾ ಅಥವಾ ಇಲ್ಲವೇ ಎಂಬ ನಿಲುವಿನ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಮಾನ್ಯ ಸಭಾಧ್ಯಕ್ಷರ ಮೂಲಕ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.